ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿಇ/ಪರೀಕ್ಷೆ/ದ್ವಿ.ಪಿ.ಅ&ತಿ.ದಿ.ವಿ/2020-21 ದಿನಾಂಕ: 11-02-2021

**ಸುತ್ತೋಲೆ**

ವಿಷಯ : "2021ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅನುತ್ತೀರ್ಣ ಹಾಗೂ ಫಲಿತಾಂಶ ತಿರಸ್ಕರಿಸಿದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ."

ಉಲ್ಲೇಖ: 1.ಸಂಖ್ಯೆ:ಪಪೂಶಿಇ/ಪರೀಕ್ಷೆ/ಪೂಪಅ/02/2020-21, ದಿ:09-10-2020.
2.ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿ.ಪಿ.ಅ&ತಿ.ದಿ.ವಿ/2020-21 ದಿ:30-11-2020.
3.ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿ.ಪಿ.ಅ&ತಿ.ದಿ.ವಿ/2020-21 ದಿ:14-12-2020.
4.ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿ.ಪಿ.ಅ&ತಿ.ದಿ.ವಿ/2020-21 ದಿ:28-12-2020.
5. ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿ.ಪಿ.ಅ&ತಿ.ದಿ.ವಿ/2020-21 ದಿ:11-01-2021.
6. ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿ.ಪಿ.ಅ&ತಿ.ದಿ.ವಿ/2020-21 ದಿ:29-01-2021.

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳನ್ವಯ 2021ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅನುತ್ತೀರ್ಣ ವಿದ್ಯಾರ್ಥಿಗಳು ಹಾಗೂ ಫಲಿತಾಂಶ ತಿರಸ್ಕರಿಸಿದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಉಲ್ಲೇಖಿತ (1)ರ ಸುತ್ತೋಲೆಯಲ್ಲಿ 27-11-2020 ರವರೆಗೆ ದಂಡ ಶುಲ್ಕದೊಂದಿಗೆ ಅವಕಾಶ ನೀಡಲಾಗಿತ್ತು. ಉಲ್ಲೇಖ (2) ರಲ್ಲಿ ಸದರಿ ದಿನಾಂಕವನ್ನು 11-12-2020 ರವರೆಗೆ ವಿಸ್ತರಿಸಲಾಗಿತ್ತು. ಉಲ್ಲೇಖ (3) ರನ್ವಯ ಸದರಿ ದಿನಾಂಕವನ್ನು 24-12-2020 ರವರೆಗೆ ವಿಸ್ತರಿಸಲಾಗಿತ್ತು. ಉಲ್ಲೇಖ (4) ರನ್ವಯ ಸದರಿ ದಿನಾಂಕವನ್ನು 08-01-2021 ರವರೆಗೆ ವಿಸ್ತರಿಸಲಾಗಿತ್ತು. ಉಲ್ಲೇಖ (5) ರನ್ವಯ ಸದರಿ ದಿನಾಂಕವನ್ನು 22-01-2021 ರವರೆಗೆ ವಿಸ್ತರಿಸಲಾಗಿತ್ತು ಹಾಗೂ ಉಲ್ಲೇಖ (6) ರನ್ವಯ ಸದರಿ ದಿನಾಂಕವನ್ನು 06-02-2021ರವರೆಗೆ ವಿಸ್ತರಿಸಲಾಗಿತ್ತು

ಆದರೆ ವಿದ್ಯಾರ್ಥಿಗಳ ಮನವಿಗಳ ಮೇರೆಗೆ ಸದರಿ ಪರೀಕ್ಷೆಗೆ ಶುಲ್ಕ ಪಾವತಿಸುವ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಲಾಗಿದೆ.

| ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ (ಅನುತ್ತೀರ್ಣ ಮತ್ತು ಫಲಿತಾಂಶ ತಿರಸ್ಕರಿಸಿದ ವಿದ್ಯಾರ್ಥಿಗಳ ಮಾಹಿತಿಯನ್ನು) Online portal ನಲ್ಲಿ update ಮಾಡಲು ಅಂತಿಮ ದಿನಾಂಕ | | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಒಂದೇ ಕಂತಿನಲ್ಲಿ ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಮೂಲ ಚಲನ್ ಸಹಿತ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ದಿನಾಂಕ |
|---|---|---|---|
| ಪರೀಕ್ಷಾ ಶುಲ್ಕ +ದಂಡ ಶುಲ್ಕ 500ರೂ. +ವಿಶೇಷ ದಂಡ ಶುಲ್ಕ 700ರೂ. +ವಿಶೇಷ ದಂಡ ಶುಲ್ಕ 1320ರೂ. | 11-02-2021 ರಿಂದ 20-02-2021 | 22-02-2021 | 23-02-2021 |

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು Online portal ನಲ್ಲಿ update ಮಾಡಿರುವುದನ್ನು ಖಾತ್ರಿ ಪಡಿಸಿಕೊಂಡು update ಮಾಡಿರುವುದಕ್ಕೆ ಸಂಬಂಧಿಸಿದಂತೆ ಮುಚ್ಚಳಿಕೆ ಪತ್ರ ಪಡೆದ ನಂತರ ಕಾಲೇಜುವಾರು ಕ್ರೋಢೀಕೃತ ವಿದ್ಯಾರ್ಥಿಗಳ ಪಟ್ಟಿ, ಹಣ ಪಾವತಿಸಿರುವ ಮೂಲ ಚಲನ್ ಹಾಗೂ ಮುಚ್ಚಳಿಕೆ ಪತ್ರವನ್ನು ಖುದ್ದಾಗಿ ಕೇಂದ್ರ ಕಛೇರಿಗೆ ಸಲ್ಲಿಸಬೇಕಾದ ದಿನಾಂಕ : 25-02-2021.

(ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

ಜಂಟಿ ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು :

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು) ಪ್ರತಿಯನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಅಂಟಿಸಲು ತಿಳಿಸಿದೆ.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ
4. ಗಣಕಶಾಖೆಗೆ
5. ಇ-ಆಡಳಿತ ಶಾಖೆ, (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು). ಮತ್ತು ಎಲ್ಲಾ ಮಾಧ್ಯಮಗಳಲ್ಲಿ ಪ್ರಕಟವಾಗುವಂತೆ ಕ್ರಮ ಕೈಗೊಳ್ಳಲು
6. ಕಛೇರಿ ಪ್ರತಿ.